## ಕೇಂದ್ರ ಸರ್ಕಾರದ ಸಿ.ಆರ್.ಎಫ್ ಯೋಜನೆ

2398 (3112) : ಶ್ರೀ ಅಂಗಾರ ಎಸ್. (ಸೂಳ್ಯ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) 1999–2000 ರಿಂದ 2002 ರವರೆಗೆ ಕೇಂದ್ರ ಸರ್ಕಾರದಿಂದ ರಸ್ತೆ ಅಭಿವೃದ್ಧಿಗಾಗಿ (ಸಿ.ಆರ್.ಎಫ್) ರಾಜ್ಯಕ್ಕೆ ಎಷ್ಟು ಅನುದಾನವನ್ನು ಬಿಡುಗಡೆ ಮಾಡಿದೆ; ವರ್ಷ, ಅನುದಾನದ ವಿವರ ನೀಡುವುದು;

ಆ) ಸದರಿ ಅನುದಾನದಲ್ಲಿ ಯಾವ ಯಾವ ಜಿಲ್ಲೆಗೆ ಎಷ್ಟೆಷ್ಟು ಅನುದಾನ ಒದಗಿಸಲಾಗಿದೆ; ಪೂರ್ತಿ ವಿವರ ನೀಡುವುದು?

ಶ್ರೀ ಧರ್ಮಸಿಂಗ್ (ಲೋಕೋಪಯೋಗಿ ಸಚಿವರು):

ಅ) 1999–2000 ರಿಂದ 2002 ವರೆಗೆ ಕೇಂದ್ರ ಸರ್ಕಾರದಿಂದ ರಸ್ತೆ ಅಭಿವೃದ್ಧಿಗಾಗಿ (ಸಿ.ಆರ್.ಎಫ್) ರಾಜ್ಯಕ್ಕೆ ಈ ಕೆಳಕಂಡಂತೆ ಅನುದಾನವನ್ನು ಬಿಡುಗಡೆ ಮಾಡಿದೆ.

| ವರ್ಷ | ಅನುದಾನ ಬಿಡುಗಡೆ ಲಕ್ಷ ರೂ.ಗಳಲ್ಲಿ |
|---|---|
| 1999–2000 | 16.01 |
| 2000–2001 | 2149.50 |
| 2001–2002 | 1196.08 |
| ಒಟ್ಟು | 3361.59 |

ಆ) ಕೇಂದ್ರ ಸರ್ಕಾರದಿಂದ ಮಂಜೂರಾಗಿರುವ ಕಾಮಗಾರಿಗಳ ಜಿಲ್ಲಾವಾರು ಮೊತ್ತದ ವಿವರವನ್ನು ಅನುಬಂಧದಲ್ಲಿ ನೀಡಲಾಗಿದೆ.

**ಅನುಬಂಧ**

| Sl. No. | District | No.of works | Length of Road proposed for improvement | Sanctioned estimated cost (Rs. in lakhs) |
|---|---|---|---|---|
| 1 | 2 | 3 | 4 | 5 |
| 1 | Bagalkot | 7 | 71.50 | 597.37 |
| 2 | Bangalore (Rural) | 8 | 100.45 | 857.50 |
| 3 | Belgaum | 16 | 146.91 | 1499.55 |
| 4 | Bidar | 15 | 114.95 | 1092.97 |
| 5 | Bijapur | 6 | 32.40 | 404.00 |
| 6 | Chamarajnagar | 5 | 35.15 | 271.00 |
| 7 | Chickmagalore | 9 | 66.00 | 511.00 |
| 8 | Chitradurga | 5 | 51.61 | 302.00 |

| 1 | 2 | 3 | 4 | 5 |
|---|---|---|---|---|
| 9 | Dakshina Kannada | 8 | 107.05 | 809.10 |
| 10 | Davanagere | 5 | 49.00 | 380.00 |
| 11 | Dharwad | 8 | 50.99 | 561.87 |
| 12 | Gadag | 4 | 38.10 | 300.00 |
| 13 | Gulbarga | 18 | 138.60 | 1333.16 |
| 14 | Hassan | 14 | 118.36 | 1006.73 |
| 15 | Haveri | 5 | 40.15 | 280.00 |
| 16 | Kodagu | 2 | 15.90 | 115.00 |
| 17 | Kolar | 6 | 35.28 | 278.61 |
| 18 | Koppal | 4 | 19.70 | 210.00 |
| 19 | Mandya | 16 | 143.21 | 1797.00 |
| 20 | Mysore | 4 | 37.81 | 260.00 |
| 21 | Raichur | 6 | 33.70 | 298.99 |
| 22 | Shimoga | 7 | 93.93 | 460.80 |
| 23 | Tumkur | 9 | 164.50 | 2091.59 |
| 24 | Udupi | 8 | 69.49 | 572.20 |
| 25 | Uttara Kannada | 3 | 20.70 | 118.00 |
| | **Total** | **198** | **1795.37** | **16408.44** |

**ಕುಕ್ಕೆ ಶ್ರೀ ಸುಬ್ರಮಣ್ಯದ ಕುಮಾರ ಪರ್ವತ ಪ್ರದೇಶವನ್ನು ಪ್ರವಾಸೋದ್ಯಮ ಸ್ಥಳವೆಂದು ಘೋಷಣೆ ಮಾಡುವುದು**

2399 (3113) : ಶ್ರೀ ಅಂಗಾರ ಎಸ್. (ಸೂಳ್ಯ) : ಮಾನ್ಯ ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸುಳ್ಯ ತಾಲ್ಲೂಕಿನ ಕುಕ್ಕೆ ಶ್ರೀ ಸುಬ್ರಮಣ್ಯದ ಕುಮಾರ ಪರ್ವತದಲ್ಲಿ ಕುಮಾರ ಪಾದುಕೆಯಿಂದ ನೀರು ಹರಿದು ಬರುತ್ತಿದ್ದು, ಪ್ರವಾಸೋದ್ಯಮ ಸ್ಥಳವನ್ನಾಗಿ ಮಾಡುವ ಉದ್ದೇಶ ಸರ್ಕಾರಕ್ಕೆ ಇದೆಯೇ: ಇದ್ದರೆ ಎಷ್ಟು ಸಮಯದಲ್ಲಿ ಮಾಡಲಾಗುವುದು?

ಶ್ರೀ ಡಿ.ಬಿ. ಇನಾಂದಾರ್ (ಪ್ರವಾಸೋದ್ಯಮ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವರು): ಅ) ಪ್ರಸ್ತುತ ಕುಕ್ಕೆ ಶ್ರೀ ಸುಬ್ರಮಣ್ಯದ ಕುಮಾರ ಪರ್ವತವನ್ನು ಪ್ರವಾಸಿ ತಾಣವನ್ನಾಗಿಸುವ ಯೋಜನೆ ಸರ್ಕಾರದ ಮುಂದೆ ಇರುವುದಿಲ್ಲ.

**ಕುಶಾಲನಗರ ಗಂಧದ ಕೋಟೆಯಲ್ಲಿ ಗಂಧದ ಮರ ಕಳ್ಳತನವಾಗಿ ನಷ್ಟವಾಗಿರುವುದು**

2400 (3072) : ಶ್ರೀ ಅಪ್ಪಚ್ಚುರಂಜನ್ ಎಂ.ಪಿ. (ಸೋಮವಾರಪೇಟೆ) : ಮಾನ್ಯ ಅರಣ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?